ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ, ಬೆಂಗಳೂರು–560002

ಸಂಖ್ಯೆ ಸಿಎಸಿ–8/ಬಿ.ಇಡಿ ಕೌನ್ಸಲಿಂಗ್ ವೇ.ಪ/2009–10 ದಿನಾಂಕ 24–04–2010

ಗೆ,

ರಾಜ್ಯದ ಎಲ್ಲಾ ಡಯಟ್ /ಸಿ.ಟಿ.ಇ. ಪ್ರಾಂಶುಪಾಲರಿಗೆ

ಮಾನ್ಯರೇ,

ವಿಷಯ:– ಕರ್ನಾಟಕ ಸರ್ಕಾರದ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಂತೆ
2009–10ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಕೌನ್ಸಲಿಂಗ್ ನಡೆಸುವ ಬಗ್ಗೆ

ಉಲ್ಲೇಖ:–ಸರ್ಕಾರದ ಪತ್ರ ಸಂಖ್ಯೆ: ಇಡಿ 105 ಯುಎನ್ಇ 2009 ದಿನಾಂಕ 24–04–2010

–0–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಪತ್ರದನ್ವಯ 2009–10ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ಅರ್ಜಿ ಸಲ್ಲಿಸಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದು ಆಂತರಿಕ ಅಂಕಗಳು ಸೇರಿದಂತೆ ಪದವಿಯಲ್ಲಿ ಶೇಕಡ 40 ಅಂಕಗಳನ್ನು ಗಳಿಸಿರುವ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹಾಗೂ ಆಂತರಿಕ ಅಂಕಗಳು ಸೇರಿದಂತೆ ಪದವಿಯಲ್ಲಿ ಶೇಕಡ 50 ಅಂಕಗಳನ್ನು ಗಳಿಸಿರುವ ಇತರೆ ಪ್ರವರ್ಗಗಳ ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಂತೆ ದಾಖಲಾತಿಗಾಗಿ ಕೌನ್ಸಲಿಂಗ್ ಅನ್ನು ದಿನಾಂಕ 27–04–2010ರಂದು ಬೆಳಿಗ್ಗೆ 9.00 ಗಂಟೆಗೆ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ನಡೆಸಲಾಗುವುದು. ಈ ಕೌನ್ಸಲಿಂಗ್ ದಾಖಲಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. ನ್ಯಾಯಾಲಯದ ಆದೇಶದಂತೆ ಮಾನ್ಯತೆ ಪಡೆದಿರುವ ಬಿ.ಇಡಿ ಶಿಕ್ಷಣ ಸಂಸ್ಥೆಗಳಿಗೆ ಈಗಾಗಲೇ ದಾಖಲಾತಿ ಮಾಡಿ ಉಳಿದಿರುವ ಖಾಲಿ ಸೀಟುಗಳಿಗೆ ಕೌನ್ಸಿಲಿಂಗ್ ಮೂಲಕ ದಾಖಲಾತಿ ನೀಡಲಾಗುವುದು. ಇದನ್ನು ಮನಗಂಡು ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಕೌನ್ಸಲಿಂಗ್‌ಗೆ ಹಾಜರಾಗುವುದು.

ಅಭ್ಯರ್ಥಿಗಳು ಕೌನ್ಸಲಿಂಗ್‌ನಲ್ಲಿ ಭಾಗವಹಿಸುವಾಗ ಸಲ್ಲಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ: 1) ಅನ್ವಯಿಸುವ ಎಲ್ಲಾ ಮೂಲ ದಾಖಲೆಗಳು 2) ಬ್ಯಾಂಕ್ ಹುಂಡಿಯ ರೂಪದಲ್ಲಿ ಶುಲ್ಕ 3) ನ್ಯಾಯಾಲಯವು ತಿಳಿಸಿರುವಂತೆ ಮುಚ್ಚಳಿಕೆ **(Under taking)** ಬರೆದು ಕೊಡಲು ರೂ. 20/– ರ ಖಾಲಿ ಛಾಪಾ ಕಾಗದ ತರುವುದು. ಇದರಲ್ಲಿ ಅಭ್ಯರ್ಥಿಯು ಮುಚ್ಚಳಿಕೆಯನ್ನು ಬರೆದು ಸಹಿ ಮಾಡಿ ದಾಖಲಾತಿ ಸಮಯದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಸಲ್ಲಿಸಬೇಕಾಗುತ್ತದೆ. ಅಭ್ಯರ್ಥಿಗಳಿಗೆ ಸೂಚನೆಯನ್ನು ಹಾಗೂ ಲಭ್ಯವಿರವ ಸೀಟುಗಳ ಮಾಹಿತಿಯನ್ನು ಸಹ ಈ ಪತ್ರದ ಜೊತೆ ಲಗತ್ತಿಸಿದ್ದು ಅದನ್ನು ಅಭ್ಯರ್ಥಿಗಳಿಗೆ ತಿಳಿಯುವಂತೆ ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ಕೋರಿದೆ. ಲಭ್ಯವಿರುವ ಸೀಟುಗಳನ್ನು ಕೌನ್ಸಿಲಿಂಗ್ ನಡೆಯುವ ದಿನ ಮುಂಚಿತವಾಗಿ ಕೇಂದ್ರೀಕೃತ ದಾಖಲಾತಿ ಘಟಕದ ಸೂಚನಾ ಫಲಕದಲ್ಲಿಯೂ ಪ್ರಕಟಿಸಲಾಗುವುದು.

# ಕೌನ್ಸಿಲಿಂಗ್‌ಗೆ ಬರುವ ಬಿ.ಇಡಿ ಅಭ್ಯರ್ಥಿಗಳ ಮಾಹಿತಿಗಾಗಿ

| | | |
|---|---|---|
| 1 | ಕೌನ್ಸಿಲಿಂಗ್ ದಿನಾಂಕ | ದಿನಾಂಕ 27–04–2010, ಸಮಯ ಬೆಳಿಗ್ಗೆ 9.00 ಗಂಟೆಗೆ |
| 2 | ಕೌನ್ಸಲಿಂಗ್‌ಗೆ ಅರ್ಹತೆ ಇಲ್ಲದ ಅಭ್ಯರ್ಥಿಗಳು | 2009–10ನೇ ಸಾಲಿನಲ್ಲಿ ಬಿ.ಇಡಿ ದಾಖಲಾತಿಗೆ ಈಗಾಗಲೇ ದಾಖಲಾತಿ ಪತ್ರ ಪಡೆದಿರುವ ಅಭ್ಯರ್ಥಿಗಳು ಈ ಕೌನ್ಸಲಿಂಗ್‌ನಲ್ಲಿ ಭಾಗವಹಿಸುವಂತಿಲ್ಲ. |
| 3 | ಕೌನ್ಸಿಲಿಂಗ್‌ಗೆ ಅರ್ಹತೆ ಇರುವ ಅಭ್ಯರ್ಥಿಗಳು | 2009–10ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ಅರ್ಜಿ ಸಲ್ಲಿಸಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಿರುವ ಈ ಕೆಳಕಂಡ ಅಭ್ಯರ್ಥಿಗಳು ಅರ್ಹರಾಗಿರುವರು:<br>1) ಆಂತರಿಕ ಅಂಕಗಳು ಸೇರಿದಂತೆ ಪದವಿಯಲ್ಲಿ ಶೇಕಡ 40 ಅಂಕಗಳನ್ನು ಗಳಿಸಿರುವ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳು ಈ ಕೌನ್ಸಲಿಂಗ್‌ನಲ್ಲಿ ಭಾಗವಹಿಸಬಹುದು<br>2) ಆಂತರಿಕ ಅಂಕಗಳು ಸೇರಿದಂತೆ ಪದವಿಯಲ್ಲಿ ಶೇಕಡ 50 ಅಂಕಗಳನ್ನು ಗಳಿಸಿರುವ ಇತರೆ ಪ್ರವರ್ಗಗಳ ಅಭ್ಯರ್ಥಿಗಳು ಈ ಕೌನ್ಸಲಿಂಗ್‌ನಲ್ಲಿ ಭಾಗವಹಿಸಬಹುದು. |
| 4 | ದಾಖಲಾತಿ ಶುಲ್ಕ | ಕಲಾ ವಿಭಾಗಕ್ಕೆ ರೂ. 5000+1000+4000<br>ವಿಜ್ಞಾನ ವಿಭಾಗಕ್ಕೆ ರೂ. 5150+1000+4000<br>ಪ್ರತ್ಯೇಕ ಮೂರು ಬ್ಯಾಂಕ್ ಹುಂಡಿಗಳನ್ನು ತರುವುದು.<br>ವಾರ್ಷಿಕ ಆದಾಯ ರೂ. 1 ಲಕ್ಷಕ್ಕಿಂತ ಕಡಿಮೆ ಇದ್ದು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಇರುತ್ತದೆ. ಇವರು ಮೇಲೆ ತಿಳಿಸಿರುವಂತೆ ಬ್ಯಾಂಕ್ ಹುಂಡಿಗಳನ್ನು ತರುವ ಅವಶ್ಯಕತೆ ಇರುವುದಿಲ್ಲ. ಆದರೆ ಉಳಿದ ಅಭ್ಯರ್ಥಿಗಳು ಮೇಲೆ ತಿಳಿಸಿರುವಂತೆ ಪ್ರತ್ಯೇಕವಾಗಿ ಬ್ಯಾಂಕ್ ಹುಂಡಿಗಳನ್ನು ತರುವುದು. |
| 5 | ಬ್ಯಾಂಕ್ ಹುಂಡಿಯನ್ನು ಖರೀದಿಸುವ ವಿಧಾನ | ಮಾಹಿತಿ ಪುಸ್ತಿಕೆಯ ಪುಟ ಸಂಖ್ಯೆ 14, 15 ಅಥವಾ ಪುಟ ಸಂಖ್ಯೆ 26 ರ ಅಂಶ 7 ಮತ್ತು 8ರಲ್ಲಿ ತಿಳಿಸಿರುವಂತೆ ಅಭ್ಯರ್ಥಿಗಳು ಕೌನ್ಸಲಿಂಗ್‌ಗೆ ಹಾಜರಾಗುವ ಮುಂಚೆಯೇ ತಮ್ಮ ಸ್ವಂತ ಸ್ಥಳಕ್ಕೆ ಸಮೀಪದ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಮೂರು ಪ್ರತ್ಯೇಕ ಬ್ಯಾಂಕ್ ಹುಂಡಿಗಳನ್ನು **"Special Officer, C.A.C, Bangalore"** ಇವರ ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದು ತರಬೇಕು. |
| 6 | ಅರ್ಜಿಸಮೇತ ಮಾಹಿತಿ ಪುಸ್ತಿಕೆಯ ಶುಲ್ಕದ ಬಗ್ಗೆ | ಅರ್ಜಿ ಸಹಿತ ಮಾಹಿತಿ ಪುಸ್ತಿಕೆಯ ಶುಲ್ಕ ರೂ. 315/–ನ್ನು ಈಗಾಗಲೇ ಡಯಟ್ / ಸಿ.ಟಿ.ಇ.ಗಳ ಮೂಲಕ ಹಿಂದಕ್ಕೆ ಪಡೆದಿರುವ ಎಲ್ಲಾ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಅರ್ಜಿ ಸಹಿತ ಮಾಹಿತಿ ಪುಸ್ತಿಕೆಯ ಶುಲ್ಕ ರೂ. 315/– ರ ಬ್ಯಾಂಕ್ ಹುಂಡಿಯನ್ನು ಸಲ್ಲಿಸಬೇಕು. ಬ್ಯಾಂಕ್ ಹುಂಡಿಯನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ **"Special Officer, C.A.C, Bangalore"** ಇವರ ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದು ತರಬೇಕು. |
| 7 | ಕೌನ್ಸಿಲಿಂಗ್‌ನಲ್ಲಿ ಸಲ್ಲಿಸಬೇಕಾದ ಮೂಲದಾಖಲೆಗಳು. | (1) ಅಭ್ಯರ್ಥಿಯು ರೂ. 20/–ರ ಛಾಪಾ ಕಾಗದದಲ್ಲಿ ಬರೆದು ಸಹಿಮಾಡಿಕೊಟ್ಟ ಮುಚ್ಚಳಿಕೆ **(Undertaking)**<br>(2) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ<br>(3) ಪಿ.ಯು.ಸಿ. ಮೂಲ ಅಂಕಪಟ್ಟಿ<br>(4) ಪದವಿಯ ಮೂರು ವರ್ಷದ ಎಲ್ಲಾ ಪ್ರಯತ್ನಗಳ ಮೂಲ ಅಂಕಪಟ್ಟಿಗಳು |

| | | |
|---|---|---|
| | | (5) ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿರುವ ವ್ಯಾಸಂಗ ಪ್ರಮಾಣ ಪತ್ರ (ಕನಿಷ್ಟ ಏಳು ವರ್ಷ)<br>(6) 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಅನ್ವಯಿಸುವವರು ಮಾತ್ರ)<br>(7) ಜಾತಿ ಪ್ರಮಾಣ ಪತ್ರ<br>(8) ಆದಾಯ ಪ್ರಮಾಣಪತ್ರ (ಪರಿಶಿಷ್ಟ ಜಾತಿ & ಪಂಗಡದ ಅಭ್ಯರ್ಥಿಗಳಿಗೆ ಮಾತ್ರ.)<br><br>(9) ವಿಶೇಷ ಗುಂಪಿನ ಪ್ರಮಾಣ ಪತ್ರಗಳು (ವಿಶೇಷ ಗುಂಪಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)<br>(10) ಅರ್ಜಿಯ ಅಭ್ಯರ್ಥಿ ಪ್ರತಿ ಮತ್ತು ಮೂಲ ಸ್ವೀಕೃತಿ ಪತ್ರ (ಡಯಟ್ /ಸಿ.ಟಿ.ಇ. ಗೆ ಸಲ್ಲಿಸದಿದ್ದಲ್ಲಿ)<br>(11) ಮೇಲೆ ತಿಳಿಸಿರುವಂತೆ ಮೂರು ಬ್ಯಾಂಕ್ ಹುಂಡಿಗಳು |

<u>ಸೂಚನೆ</u> :

(1) ಭಾಗಶಃ ಮೂಲದಾಖಲೆಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಂತಿಲ್ಲ.

(2) ಸಾಮಾನ್ಯ ಪ್ರವೇಶ ಪರೀಕ್ಷೆಗೆ ಗೈರುಹಾಜರಾಗಿರುವ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

(3) ಕೌನ್ಸಿಲಿಂಗ್‌ಗೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಸೀಟಿನ ಮೇಲೆ ಯಾವ ಹಕ್ಕು ಇರುವುದಿಲ್ಲ ದಾಖಲಾತಿಗೆ ಸಿಂಧುವಾದಲ್ಲಿ ಮಾತ್ರ ನ್ಯಾಯಾಲಯದ ಆದೇಶದಂತೆ ಲಭ್ಯವಿರುವ ಪ್ರವರ್ಗವಾರು ಸೀಟುಗಳನ್ನು ಆಯ್ಕೆಮಾಡಿಕೊಳ್ಳಬಹುದು. ಕೌನ್ಸಿಲಿಂಗ್‌ಗೆ ಅಭ್ಯರ್ಥಿಯು ತನ್ನ ಸ್ವಂತ ಜವಾಬ್ದಾರಿಯ ಹಾಗೂ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.

ವಿಶೇಷಾಧಿಕಾರಿಗಳು